ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಚಂದ್ರಶೇಖರಯ್ಯ ಕೆಂಭಾವಿ ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ, ಭಾಲ್ಕಿ, ಬೀದರ್ ಜಿಲ್ಲೆ ಇವರ ವಿರುದ್ಧದ ಶಿಸ್ತು ಕ್ರಮ-ಅಂತಿಮ ಆದೇಶ.

ಓದಲಾಗಿದೆ:- 1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಯಚೂರು ರವರ ಪತ್ರ ಸಂಖ್ಯೆ:ಜಿಪಂಬ:ಸಿಬ್ಬಂದಿ-2/ಸಿಆರ್/2011-12/ದಿ 19.07.2011.

2) ಕಾರಣ ಕೇಳುವ ನೋಟೀಸು ಸಂಖ್ಯೆ: ಗ್ರಾಅಪ 126 ವಿಸೇಜಿ 2011 ದಿ01.10.2011.

3) ಸರ್ಕಾರದ ಆದೇಶದ ಸಂಖ್ಯೆ: ಗ್ರಾಅಪ 126 ವಿಸೇಜಿ 2011 ದಿ 08.12.2011.

4) ವಿಚಾರಣಾಧಿಕಾರಿಯವರ ವರದಿ ದಿ 18.08.2013.

5) ಎರಡನೇ ಕಾರಣ ಕೇಳುವ ನೋಟೀಸು ದಿ 02.01.2014.

6) ಶ್ರೀ ಚಂದ್ರಶೇಖರಯ್ಯ ಕೆಂಭಾವಿ ಇವರ ಲಿಖಿತ ಹೇಳಿಕೆ.

7) ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ ಇವರ ಪತ್ರ ಸಂಖ್ಯೆ: ಪಿಎಸ್‌ಸಿ/193/ಸಿಎಸ್‌ಎಸ್/15 ಪಿಎಸ್‌ಸಿ ದಿ 14.12.2015.

------

ಪ್ರಸ್ತಾವನೆ:-

ಶ್ರೀ ಚಂದ್ರಶೇಖರಯ್ಯ ಕೆಂಭಾವಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಭಾಲ್ಕಿ, ಬೀದರ್ ಜಿಲ್ಲೆ, ಇವರು ಸದರಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಈ ಕೆಳಕಂಡ ಆರೋಪಗಳಿಗೆ ಸಂಬಂದಿಸಿದಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೀದರ್ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ-(1)ರ ದಿನಾಂಕ:19-07-2011ರ ಪತ್ರದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿದ್ದರು.

ಮೇಲೆ ಓದಲಾದ(2)ರ ಕಾರಣ ಕೇಳುವ ನೋಟೀಸಿನೊಂದಿಗೆ 2010-11ನೇ ಸಾಲಿನ MGNREGA ಯೋಜನೆಯಡಿ ಕಾಮಗಾರಿಗಳ ಮಾಹಿತಿಯನ್ನು MISನಲ್ಲಿ ಅಳವಡಿಸುವ ಬಗ್ಗೆ ಜಿಲ್ಲಾ ಪಂಚಾಯತ್ ಕಚೇರಿಯಿಂದ ದಿನಾಂಕ 14.10.2010 ಮತ್ತು 27.10.2010ರ ಸುತ್ತೋಲೆಗಳಲ್ಲಿ ಸೂಕ್ತ ನಿರ್ದೇಶನಗಳನ್ನು ನೀಡಿದ್ದರೂ ಸಹ ಪಾಲಿಸದೇ ಈ ಕೆಳಕಂಡಂತೆ ಕರ್ತವ್ಯ ಲೋಪ ಎಸಗಿರುತ್ತಾರೆ.

ಸದರಿ ನಿರ್ದೇಶಗಳನ್ನು ಪಾಲಿಸದಿರುವವರ ವಿರುದ್ಧ ಶಿಸ್ತು ಕಮ ಜರುಗಿಸುವ ಬಗ್ಗೆ ಹಾಗೂ ಕ್ರಿಮಿನಲ್ ಕೇಸ್ ದಾಖಲಿಸುವ ಬಗ್ಗೆ ತಿಳಿಸಲಾಗಿತ್ತು. ಸದರಿ ಸುತ್ತೋಲೆಗಳಲ್ಲಿ ಕಾಮಗಾರಿಗಳ ನಿರ್ವಹಣೆ ಮಾಡದೇ MIS ದಾಖಲಿಸಿದ್ದಲ್ಲಿ ಹಾಗೂ ಕಾಮಗಾರಿಗಳನ್ನು ನಿರ್ವಹಿಸಿ MISನಲ್ಲಿ ಅಳವಡಿಸದೆ ಹಣ ಪಾವತಿಸಿದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ನೇರವಾಗಿ ಹೊಣೆಗಾರರನ್ನಾಗಿ ಮಾಡಲಾಗುವುದೆಂದು ಕಟ್ಟು ನಿಟ್ಟಿನ ನಿರ್ದೇಶನಗನ್ನು ನೀಡಲಾಗಿದ್ದರೂ ಸಹ ಮೇಲಾಧಿಕಾರಿಗಳ ನಿರ್ದೇಶನಗಳನ್ನು ಪಾಲನೆ ಮಾಡಿರುವುದಿಲ್ಲ.

ಭಾಲ್ಕಿ ತಾಲೂಕಿನ ಸಿದ್ದೇಶ್ವರ ಗ್ರಾಮ ಪಂಚಾಯತಿಗೆ ಸಂಬಂಧಿಸಿದಂತೆ, ಸದರಿ ಯೋಜನೆಯಡಿಯಲ್ಲಿ 85 ಕಾಮಗಾರಿಗಳು ತೆಗೆದುಕೊಳ್ಳಲಾಗಿದ್ದು, ಸದರಿ ಕಾಮಗಾರಿಗಳ ನಿರ್ವಹಿಸಿದ ಬಗ್ಗೆ ಪರಿಶೀಲನೆ ಮಾಡದೇ ಕಾಮಗಾರಿ ಆದೇಶ ಧೃಡೀಕರಣ ಪತ್ರ ನೀಡಿರುತ್ತಾರೆ.

ಭಾಲ್ಕಿ ತಾಲೂಕಿನ ಇಂಚೂರ ಗ್ರಾಮ ಪಂಚಾಯಿತಿಯಲ್ಲಿ 2010-11ನೇ ಸಾಲಿನಲ್ಲಿ ಸದರಿ ಯೋಜನೆ ಅಡಿಯಲ್ಲಿ 77 ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದ್ದು ಸದರಿ ಕಾಮಗಾರಿಗಳ ಕುರಿತು ಗ್ರಾಮ ಪಂಚಾಯತಿಯಲ್ಲಿ ಕೇವಲ 7 ಕಡತಗಳು ಮಾತ್ರ ಲಭ್ಯವಿರುತ್ತವೆ. ಉಳಿದ ಕಡತಗಳು ಲಭ್ಯವಿರುವುದಿಲ್ಲ. ಆದರೆ ತದನಂತರ ಜಿಲ್ಲಾ ಪಂಚಾಯತ ಕಚೇರಿಗೆ ಸಲ್ಲಿಸಿರುವ 70 ಕಡತಗಳಲ್ಲಿ ಸಾಕಷ್ಟು ಕಾಮಗಾರಿಗಳು ಆಗದಿದ್ದರೂ ಸಹ ಪರಿಶೀಲನೆ ಮಾಡದೆ, ಕಾಮಗಾರಿ ಆದೇಶ ಮತ್ತು ಧೃಢೀಕರಣ ಪತ್ರ ನೀಡಿರುತ್ತಾರೆ.

ಭಾಲ್ಕಿ ತಾಲೂಕಿನ ವರವಟ್ಟಿ ಗ್ರಾಮ ಪಂಚಾಯತಿಯಲ್ಲಿ 2010-11ನೇ ಸಾಲಿನಲ್ಲಿ MGNREGA ಯೋಜನೆ ಅಡಿಯಲ್ಲಿ 117 ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದ್ದು. ಸದರಿ ಕಾಮಗಾರಿಗಳ ಪರಿಶೀಲನೆ ಮಾಡದೆ ಕಾಮಗಾರಿ ಆದೇಶ ಮತ್ತು ಧೃಢೀಕರಣ ನೀಡಲಾಗಿದೆ ಹಾಗೂ ಈ ಪೈಕಿ 11 ಕಾಮಗಾರಿಗಳು ಕ್ರಿಯಾ ಯೋಜನೆಯಡಿ ಸೇರದಿದ್ದರೂ ಸಹ ಕಾಮಗಾರಿ ಆದೇಶ ಮತ್ತು ಧೃಢೀಕರಣ ಪತ್ರ ನೀಡಿರುತ್ತಾರೆ.

ಭಾಲ್ಕಿ ತಾಲೂಕಿನ ಗ್ರಾಮ ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ಸದರಿ ಯೋಜನೆ ಅಡಿಯಲ್ಲಿ ಕಾಮಗಾರಿಗಳ ಆದೇಶ ನೀಡಲು ಹಂಚಿಕೆಯನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಿರುವುದಿಲ್ಲ. ಸದರಿ ಹಂಚಿಕೆಯಲ್ಲಿ ವಿವಿಧ ಗ್ರಾಮ ಪಂಚಾಯತಿಗಳಲ್ಲಿ ನಿರ್ವಹಿಸಿದ ಕಾಮಗಾರಿಗಳ ವಿವರಗಳು ಇರುವುದಿಲ್ಲಾ. ಕಡ್ಡಾಯವಾಗಿ ಪ್ರತಿಯೊಂದು ಕಾಮಗಾರಿಗೆ ನೀಡಿರುವ ಆದೇಶವನ್ನು ಹಂಚಿಕೆಯಲ್ಲಿ ನಮೂದಿಸಿ ಆದೇಶ ನೀಡಬೇಕಾಗಿದ್ದು, ಯೋಜನೆ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಮನಬಂದಂತೆ ಕಾಮಗಾರಿಗಳ ಆದೇಶವನ್ನು ನೀಡಲಾಗಿದೆ.

ಕಾಮಗಾರಿಗಳ ಆದೇಶ ನೀಡಿರುವ ಬಗ್ಗೆ ಕಚೇರಿಯಲ್ಲಿ ಯಾವುದೇ ದಾಖಲೆಗಳು ಲಭ್ಯವಿರುವುದಿಲ್ಲ ಹಾಗೂ ಕಾಮಗಾರಿಗಳ ಸ್ಥಳ ಪರಿಶೀಲನೆಯನ್ನು ಮಾಡದೆ, ಯೋಜನೆಯ ಮಾರ್ಗಸೂಚಿಗಳನ್ವಯ ಪರಿಶೀಲನೆ ಮಾಡದೆ ಕಾಮಗಾರಿಗಳ ಆದೇಶ ಹಾಗೂ ಧೃಢೀಕರಣ ಪತ್ರಗಳನ್ನು ನೇರವಾಗಿ ಗುತ್ತಿಗೆದಾರರಿಗೆ ನೀಡಿ ಸರ್ಕಾರದ ಹಣ ದುರುಪಯೋಗಪಡಿಸಿಕೊಳ್ಳುವಲ್ಲಿ ಶಾಮೀಲಾಗಿರುತ್ತಾರೆ.

ಗ್ರಾಮ ಪಂಚಾಯತಿಗಳ ಪಂಚಾಯತ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಕಿರಿಯ ಅಭಿಯಂತರರು ಮತ್ತು ಕಂಪ್ಯೂಟರ ಅಪರೇಟರಗಳ ವಿರುದ್ಧ ಕ್ರಿಮಿನಲ್ ಕೇಸಗಳನ್ನು ದಾಖಲಿಸಲು ಜಿಲ್ಲಾ ಪಂಚಾಯಿತಿ ಕಛೇರಿಯ ಪತ್ರ ಸಂಖ್ಯೆ: ಜಿಪಂಬಿ/ಸಿಆರ್/4/2011-12, ದಿನಾಂಕ: 08.04.2011ರಲ್ಲಿ ಸದರಿಯವರುಗಳ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಲು ಸೂಚಿಸಲಾಗಿದ್ದರೂ ಸಹ ಕ್ರಿಮಿನಲ್ ಕೇಸ ದಾಖಲಿಸುವಲ್ಲಿ ವಿಫಲರಾಗಿರುತ್ತಾರೆ.

2010-11ನೇ ಸಾಲಿನ MGNREGA ಯೊಜನೆಯಡಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ದಿನಾಂಕ 01.04.2011ಕ್ಕೆ ಆಗಿರುವ ಖರ್ಚಿನ ವಿವರಗಳನ್ನು ಪರಿಶೀಲಿಸಲಾಗಿ ಭಾಲ್ಕಿ ತಾಲೂಕಿನಲ್ಲಿ ದಿನಾಂಕ 01.03.2011ರವರೆಗೆ ರೂ. 1557.74535ಲಕ್ಷಗಳ MIS ಮಾಡಿ ಖರ್ಚು ಭರಿಸಲಾಗಿರುತ್ತದೆ. ಆದರೆ ಕೇವಲ ಒಂದು ತಿಂಗಳಲ್ಲಿ ಅಂದರೆ ಮಾರ್ಚ-2011ಕ್ಕೆ ರೂ.1757.24621ಲಕ್ಷ MIS ಮಾಡಿ ಖರ್ಚು ಭರಿಸಲಾಗಿರುತ್ತದೆ. ಸದರಿ ತಃಖ್ತೆಯನ್ವಯ ಒಂದು ವರ್ಷದ ಕಾಮಗಾರಿಗಳು ಒಂದೇ ತಿಂಗಳಲ್ಲಿ ನಿರ್ವಹಿಸಿರುವಂತೆ ಬೋಗಸ್ MIS ಮಾಡಿ ಕಾಮಗಾರಿಗಳು ನಿರ್ವಹಿಸದೆ ಸರ್ಕಾರದ ಹಣ ದುರುಪಯೋಗ ಪಡಿಸಿಕೊಂಡಿರುತ್ತಾರೆ. ಪ್ರತಿಯೊಂದು ಗ್ರಾಮ ಪಂಚಾಯಿತಿಗೆ ಸಂಬಂಧಿಸಿದಂತೆ ಕಾಮಗಾರಿಗಳು ನಿರ್ವಹಿಸದ ಬಗ್ಗೆ ಪರಿಶೀಲನೆ ಮಾಡಿ, ಕಾಮಗಾರಿ ಆದೇಶ ಮತ್ತು ಧೃಢೀಕರಣ ಪತ್ರ ನೀಡಿದಲ್ಲಿ ಸರ್ಕಾರದ ಹಣ ದುರುಪಯೋಗವಾಗುವುದನ್ನು ತಡೆಗಟ್ಟಬಹುದಾಗಿತ್ತು. ಆದರೆ ಇವರು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಮೇಲೆ ಹಿಡಿತ ಇಟ್ಟುಕೊಳ್ಳದೆ ಪಂಚಾಯತ್ ಅಭಿವೃದ್ಧಿ ಅಧಿಕಾರಿ

ಹಾಗೂ ಗ್ರಾಮ ಪಂಚಾಯತ್ ಸದಸ್ಯರುಗಳೊಂದಿಗೆ ಶಾಮೀಲಾಗಿ ಸರ್ಕಾರದ ಹಣ ದುರುಪಯೋಗಪಡಿಸಿಕೊಂಡಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಶ್ರೀ ಚಂದ್ರಶೇಖರಯ್ಯ ಕೆಂಭಾವಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ, ಭಾಲ್ಕಿ, ಬೀದರ್ ಜಿಲ್ಲೆ ಇವರು ಎಸಗಿರುವ ಕರ್ತವ್ಯಲೋಪಗಳ ಬಗ್ಗೆ ಕನಾಸೇ (ವನಿ ಮತ್ತು ಮೇ) 1957ರ ನಿಯಮ 11 ರಡಿ ಶಿಸ್ತು ಕ್ರಮ ಜರುಗಿಸಲು ಕಾರಣ ಕೇಳುವ ನೋಟೀಸಿನೊಂದಿಗೆ ದೋಷಾರೋಪಣಾ ಪಟ್ಟಿಯ ಅನುಬಂಧ-1 ರಿಂದ 4ನ್ನು ಮೇಲೆ ಓದಲಾದ ಕ್ರಮ ಸಂಖ್ಯೆ-(2)ರಲ್ಲಿ ಜಾರಿ ಮಾಡಲಾಗಿತ್ತು. ಸದರಿ ನೋಟೀಸಿಗೆ ಆರೋಪಿತ ಅಧಿಕಾರಿಯು ನಿಗದಿತ ಅವಧಿಯಲ್ಲಿ ಲಿಖಿತ ಹೇಳಿಕೆಗಳನ್ನು ಸಲ್ಲಿಸದೆ ಇರುವುದರಿಂದ ಅವರ ಹೇಳಿಕೆ ಏನು ಇಲ್ಲವೆಂದು ಪರಿಗಣಿಸಿ ಸದರಿ ಅಧಿಕಾರಿ ವಿರುದ್ಧದ ಆರೋಪಗಳ ಸತ್ಯಾಸತ್ಯತೆಯನ್ನು ಕಂಡು ಹಿಡಿಯಲು ಕೂಲಂಕಷ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವನಿ ಮತ್ತು ಮೇ) ನಿಯಮಾವಳಿ 1957ರ ನಿಯಮ 11ರ ಅನ್ವಯ ವಿಧಿ ವಿಧಾನದನ್ವಯ ನಡೆಸಲು ಸರ್ಕಾರವು ತೀರ್ಮಾನಿಸಿ, ಮೇಲೆ ಕ್ರಮ ಸಂಖ್ಯೆ-(3)ರಲ್ಲಿ ಓದಲಾದ ದಿನಾಂಕ 08.12.2011ರ ಆದೇಶದಲ್ಲಿ ಉಪಕಾರ್ಯದರ್ಶಿ ಜಿಲ್ಲಾ ಪಂಚಾಯತಿ(ಆಡಳಿತ) ಬೀದರ್ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ-(4)ರಲ್ಲಿ ಓದಲಾದ ದಿನಾಂಕ 18.08.2013ರಂದು ವಿಚಾರಣಾಧಿಕಾರಿಯವರು ಸರ್ಕಾರಕ್ಕೆ ವಿಚಾರಣಾ ವರದಿಯನ್ನು ಸಲ್ಲಿಸಿ, ಆಪಾದಿತರ ವಿರುದ್ಧ ಮಾಡಿರುವ ಆರೋಪಗಳಲ್ಲಿ 7ನೇ ಆರೋಪವು ಸಾಬೀತಾಗಿರುವುದಾಗಿ ವರದಿ ಸಲ್ಲಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ-(5)ರಲ್ಲಿ ಓದಲಾದ ದಿನಾಂಕ 02.01.2014ರಂದು ಶ್ರೀ ಚಂದ್ರಶೇಖರಯ್ಯ ಕೆಂಭಾವಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಭಾಲ್ಕಿ, ಬೀದರ್ ಜಿಲ್ಲೆ ಇವರಿಗೆ ವಿಚಾರಣಾ ವರದಿಯ ಪ್ರತಿಯೊಂದಿಗೆ ಎರಡನೇ ಕಾರಣಕೇಳುವ ನೋಟೀಸನ್ನು ಜಾರಿಮಾಡಲಾಗಿತ್ತು. ಸದರಿ ನೋಟೀಸಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ-(6)ರಲ್ಲಿ ಲಿಖಿತ ಹೇಳಿಕೆಗಳನ್ನು ಸಲ್ಲಿಸುತ್ತಾ, 7ನೇ ಆರೋಪವು ಭಾಗಶ: ಸಾಬೀತಾಗಿದೆ ಎಂದು ತಿಳಿಸಿದ್ದು, ಈ ಆರೋಪದಲ್ಲಿ ತಾವು ಆರೋಪಿಯಾಗಿರುವುದಿಲ್ಲವೆಂದು, ಮಾರ್ಚ ತಿಂಗಳಿನಲ್ಲಿ ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯತಿಗಳ ಕಾಮಗಾರಿ ವೀಕ್ಷಿಸಲು ಸಾಧ್ಯವಾಗದ ಕಾರಣ ಎಂ.ಐ.ಎಸ್.ನಲ್ಲಿ ಪಿಡಿಓ ರವರು 2010-11 ರ ಅಕ್ಟೋಬರ್ ದಿಂದ ಮಾರ್ಚ್ ವರೆಗೆ ತೆಗೆದುಕೊಂಡ ಎಲ್ಲಾ ಕಾಮಗಾರಿಗಳ ಎಂ.ಐ.ಎಸ್.ನ್ನು ಮಾರ್ಚ ತಿಂಗಳಲ್ಲಿ ಮಾಡಿರುವುದರಿಂದ ಹೆಚ್ಚು ಕಂಡು ಬಂದಿರುವುದು. ಮತ್ತು ಎಲ್ಲಾ ಕಾಮಗಾರಿಗಳನ್ನು ನೋಡಲು ಅಧಿಕಾರಿಯವರು ತಪಾಸಣೆ ಮಾಡಿರುವರು. ಹಾಗೂ 2010-11ರಲ್ಲಿ ಎಂ.ಐ.ಎಸ್ ಆದ ಕಾಮಗಾರಿಗಳಿಗೆ ಸುಮಾರು ಕಾಮಗಾರಿಗಳಿಗೆ ಹಣ ಪಾವತಿಯಾಗಿರುವುದಿಲ್ಲ. ಆದ್ದರಿಂದ ತಾವು ಸರ್ಕಾರಿ ಕೆಲಸದಲ್ಲಿ ಯಾವುದೇ ಆರೋಪವೆಸಗಿಲ್ಲವೆಂದು, ಆದ್ದರಿಂದ ಸದರಿ ಆರೋಪದಿಂದ ಮುಕ್ತಾಯಗೊಳಿಸಬೇಕೆಂದು. ಹಾಗೂ ದಿನಾಂಕ 30.06.2012ರಂದು ವಯೋನಿವೃತ್ತ ಹೊಂದಿರುವುದರಿಂದ ನಿವೃತ್ತ ಜೀವನವನ್ನು ನೆಮ್ಮದಿಯಿಂದ ಬಾಳಲು ಅನುವು ಮಾಡಿಕೊಡಬೇಕೆಂದು ಕೋರಿರುತ್ತಾರೆ.

ಪ್ರಕರಣಕ್ಕೆ ಸಂಬಂಧಿಸಿದ ವಿವರಗಳನ್ನು ಸರ್ಕಾರವು ಪರಿಶೀಲಿಸಿದ್ದು, ಆಪಾದಿತ ಅಧಿಕಾರಿಯು ಅಕ್ಟೋಬರ್ 2010 ರಿಂದ ಮಾರ್ಚ್ 2011 ರವರೆಗಿನ ಎಲ್ಲಾ ವಿವರಗಳನ್ನು ಎಂ.ಐ.ಎಸ್.ನಲ್ಲಿ ಮಾರ್ಚ್ 2011ರ ಮಾಹೆಯಲ್ಲಿ ದಾಖಲಿಸಿದ್ದಾರೆ. ಹಾಗಾಗಿ, ಸದರಿ ಅಧಿಕಾರಿಯು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಗಂಭೀರ ಸ್ವರೂಪದ ದುರ್ನಡತೆ ಎಸಗಿರುವುದು ಸ್ಪಷ್ಟವಾಗಿ ಸಾಬೀತಾಗಿರುತ್ತದೆ.

ಆಪಾದಿತ ಅಧಿಕಾರಿಯು ಈಗಾಗಲೇ ನಿವೃತ್ತಿಯಾಗಿರುವುದರಿಂದ ಅವರ ಕರ್ತವ್ಯಲೋಪಕ್ಕೆ ಸಂವಾದಿಯಾಗಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ 1958ರ ನಿಯಮ 214 (1)(ಬಿ)ರನ್ವಯ ಅವರ ನಿವೃತ್ತಿ ವೇತನದಲ್ಲಿ ಪ್ರತಿ ಮಾಹೆ ರೂ.1000/-ಗಳನ್ನು ಒಂದು ವರ್ಷದ ಅವಧಿಯವರೆಗೆ ಕಡಿತಗೊಳಿಸುವ ದಂಡನೆಯನ್ನು ವಿಧಿಸಲು ಸರ್ಕಾರವು ನಿರ್ಣಯಿಸಿ ಈ ಪ್ರಸ್ತಾವನೆಗೆ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಕೋರಲಾಗಿ, ಮೇಲೆ ಕ್ರಮ ಸಂಖ್ಯೆ-(5)ರಲ್ಲಿ ಓದಲಾದ ದಿನಾಂಕ 14.12.2015ರ ಪತ್ರದಲ್ಲಿ ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗವು ಸಹಮತಿ ನೀಡಿರುತ್ತದೆ. ಅದ್ದರಿಂದ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 126 ವಿಸೇಬಿ 2011 ದಿನಾಂಕ: 18.02.2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಸರ್ಕಾರವು ಶ್ರೀ ಚಂದ್ರಶೇಖರಯ್ಯ ಕೆಂಭಾವಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಭಾಲ್ಕಿ, ಬೀದರ್ ಜಿಲ್ಲೆ. (ಪ್ರಸ್ತುತ ನಿವೃತ್ತಿ) ಇವರಿಗೆ ಕ್ರಮಾಂಕ ಗ್ರಾಅಪ 126 ವಿಸೇಬಿ 2011 ದಿನಾಂಕ 01.10.2011ರ ನೋಟೀಸಿನ ಜೊತೆ ಜಾರಿ ಮಾಡಿರುವ ಆರೋಪಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ 1958 ರ ನಿಯಮ 214(1)(ಬಿ)ರನ್ವಯ ಅವರ ನಿವೃತ್ತಿ ವೇತನದಲ್ಲಿ ಪ್ರತಿ ಮಾಹೆ ರೂ.1000/-ಗಳನ್ನು ಒಂದು ವರ್ಷದ ಅವಧಿಯವರೆಗೆ ಕಡಿತಗೊಳಿಸುವ ದಂಡನೆಯನ್ನು ವಿಧಿಸಿ, ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

18/2/16
(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇ-ಬಿ & ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ:

1. ಮಹಾಲೇಖಪಾಲರು (ಲೆಕ್ಕಪತ್ರ 1 &2) / (ಆಡಿಟ್), ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೀದರ್ .
3. ಸಂಬಂದಿಸಿದ ಅಧಿಕಾರಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೀದರ್ ಇವರ ಮುಖಾಂತರ)

**ಪ್ರತಿಯನ್ನು ಮಾಹಿತಿಗಾಗಿ:-**

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)/ ಜಂಟಿ ಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
2) ಮೇಲ್ವಿಚಾರಕರು/ಪರೀಕ್ಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
3) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.